ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
**RaithaBhavana, General Cariappa Circle, Gadag – 582 101**
**E-mail: ksrdpruadmissions@gmail.com Phone: 08372-230338, Fax: 08372-297343**

News about University Published in State Express Daily Kannada News paper

# ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕ ಹಿರಿಯ ಗಾಂಧಿವಾದಿ ಯಮನಯ್ಯ ಬಸಲಿಂಗ್ಯಯ ಮಠದ ಭೇಟಿ

**ಗದಗ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಹಿರಿಯ ಗಾಂಧಿವಾದಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ.ಯಮನಯ್ಯ ಬಸಲಿಂಗಯ್ಯ ಮಠದ ಅವರು ಹಾಗೂ ಸಮಾಜ ಸೇವಕರಾದ ಡಾ. ಪ್ರಹ್ಲಾದ್ ಬಸಪ್ಪ ಬೋವಿ ಅವರು ಭೇಟಿಯನ್ನು ನೀಡಿದರು.

ಹಿರಿಯ ಗಾಂಧಿವಾದಿಗಳಾದ .ಯಮನಯ್ಯ ಬಸಲಿಂಗಯ್ಯ ಮಠದ ಅವರು ಆಶ್ರಮದ ಕುರಿತು ಮಾತನಾಡುತ್ತಿರುವುದು.ಸಮಾಜ ಸೇವಕರಾದ ಡಾ. ಪ್ರಹ್ಲಾದ್ ಬೋವಿ ಅವರು ಸ್ಮೃತಿ ವನದಲ್ಲಿ ಸಸಿಯನ್ನು ನೆಡುತ್ತಿರುವುದು, ಮಾನ್ಯ ಕುಲಪತಿಗಳು ಮತ್ತು ಇತರರು ಉಪಸ್ಥಿತರಿವುದು.



ಆಶ್ರಮವನ್ನು ವೀಕ್ಷಿಸಿ ಮಾತನಾಡಿದ ಶ್ರೀ.ಯಮನಯ್ಯ ಬಸಲಿಂಗಯ್ಯ ಮಠದ ಅವರು ಈ ಆಶ್ರಮವು ಗುಜರಾತಿನ ಅಹಮದಾಬಾದ್‌ದಿನಸಬರಮತಿ ಆಶ್ರಮವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುತ್ತದೆ. ಜಗತ್ತಿಗೆ ಸತ್ಯ ಮತ್ತು ಅಹಿಂಸೆಯ ಮೂಲಕ ಬೆಳಕನ್ನು ಹರಿಸಿದ ಗಾಂಧೀಜಿಯವರ ಜೀವನ ಚಿತ್ರಣವನ್ನು ಕಣ್ತುಂಬಿಕೊಂಡರೆ ಮನಸ್ಸಿಗೆ ಸಂತಸ ಮತ್ತು ಉಲ್ಲಾಸ ಉಂಟಾಗುತ್ತದೆ ಎಂದು ಹೇಳಿದರು.

ಸಮಾಜ ಸೇವಕರಾದ ಡಾ. ಪ್ರಹ್ಲಾದ್ ಬೋವಿ ಅವರು ಆಶ್ರಮಕ್ಕೆ ಭೇಟಿ ನೀಡಿದ ಸವಿ ನೆನಪಿಗಾಗಿ ಆಶ್ರಮದ ಪಕ್ಕದಲ್ಲಿ ನಿರ್ಮಿಸಲಾದ ಸ್ಮೃತಿ ವನದಲ್ಲಿ ಸಸಿಯನ್ನು ನೆಟ್ಟು ಮಾತನಾಡಿ ರಮಣೀಯವಾದ ಸ್ಥಳದಲ್ಲಿ ಈ ಆಶ್ರಮವು ನಿರ್ಮಾಣಗೊಂಡಿದೆ. ಇದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮತ್ತು ಕರ್ನಾಟಕದ ಜನತೆಗೆ ಮುಖ್ಯ ಆಕರ್ಷಣೆಯ ಕೇಂದ್ರವಾಗಲಿದೆ. ಆಶ್ರಮದ ಸ್ಥಾಪನೆಗಾಗಿ ಶ್ರಮಿಸಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ ಮತ್ತು ಎಲ್ಲರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕುಲಸಚಿವರಾದಪ್ರೊ.ಬಸವರಾಜ ಎಲ್. ಲಕ್ಕಣ್ಣನವರ್, ಸಬರಮತಿ ಆಶ್ರಮದ ಸಂಚಾಲಕರಾದ ಪ್ರಕಾಶ ಮಾಚೇನಹಳ್ಳಿ, ಪ್ರಶಿಕ್ಷಣಾರ್ಥಿಯಾದ ದೇವರಾಜ ದೊಡ್ಡಮನಿ, ಸ್ಮೃತಿ ವನದ ಸಂಯೋಜಕರಾದ ಲಿಂಗರಾಜ ನೀಡುವಣಿ ಮತ್ತು ನಿರಂಜನ್ ಅವರು ಉಪಸ್ಥಿತರಿದ್ದರು.